ಇ. ₹ 35,000/– ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡಾ 30ರಷ್ಟು ದಯಾತ್ಮಕಧನ, ಕನಿಷ್ಠ ₹ 21,250/– ಮತ್ತು ಗರಿಷ್ಟ ₹ 50,000/– ವನ್ಯಪ್ರಾಣಿಗಳಿಂದ ಉಂಟಾದ ಬೆಳೆಹಾನಿ ಪಾವತಿಸುವ ದಯಾತ್ಮಕ ಧನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಸರ್ಕಾರಿ ಜಮೀನನ್ನು ಗ್ರಾಮಸ್ಥರಿಗೆ ಹಂಚಿಕೆ ಮಾಡುವುದು

181(509); ಶ್ರೀ ಅರವಿಂದ್ ಚಂದ್ರಕಾಂತ್ ಪಾಟೀಲ್ (ಖಾನಾಪುರ)

ಅ) ಖಾನಾಪುರ ತಾಲ್ಲೂಕಿನ ತೋರಾಳಿ ಗ್ರಾಮಸ್ಥರು ಸುಮಾರು ನೂರಾರು ವರ್ಷಗಳಿಂದ ಉಳುಮೆ ಮಾಡುತ್ತಿರುವ ಜಮೀನುಗಳು ಸರ್ಕಾರಿ ಜಮೀನುಗಳಾಗಿದ್ದು, ಈ ಜಮೀನುಗಳನ್ನು ಹೊರತುಪಡಿಸಿ ಇವರಿಗೆ ಬೇರಾವುದೇ ಜಮೀನುಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇವರಿಗೆ ಒಂದು ಅಥವಾ ಎರಡು ಎಕರೆಯಂತೆ ಜಮೀನು ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ವಿ.ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ) ಖಾನಾಪುರ ತಾಲ್ಲೂಕಿನ ತೋರಾಳಿ ಗ್ರಾಮದಲ್ಲಿ ಒಟ್ಟು 35 ಸರ್ವೆ ನಂಬರುಗಳಲ್ಲಿ, 1001 ಎಕರೆ 17 ಗುಂಟೆ 08 ಆಣೆ ಜಮೀನಿರುತ್ತದೆ. ಸದರಿ ಜಮೀನನ್ನು ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 269 ಆರ್‌ಇಹೆಚ್ 1998, ದಿನಾಂಕ:29–03–2000 ರ ಪ್ರಕಾರ ಕರ್ನಾಟಕ ಭೂ ಸುಧಾರಣಾ ಕಾಯ್ದೆ ಕಲಂ 77(3)ರಡಿ ಮಹಾದಾಯಿ ಯೋಜನೆಯಡಿಯಲ್ಲಿ ಸ್ಥಳಾಂತರಗೊಳ್ಳಬಹುದಾದ ಜನರಿಗೆ ಪುನರ್ ವಸತಿ ಕಲ್ಪಿಸಲು ಕಾಯ್ದಿರಿಸಲಾಗಿದೆ.

ಸದರಿ ಕಾಯ್ದಿರಿಸಿದ ಜಮೀನನ್ನು 20 ಜನರು ತಮಗೆ ಮಂಜೂರು ಮಾಡಲು ಅವರು ಸಲ್ಲಿಸಿದ ಅರ್ಜಿಗಳಲ್ಲಿ ಅವರು ಬೇರೆ

ಕಡೆಗರ ಜಮೀನು ಹೊಂದಿರುವರೇ ಎಂಬ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಸದರಿ ಜಮೀನುಗಳನ್ನು ಮಹಾದಾಯಿ ಯೋಜನೆಯಡಿಯಲ್ಲಿ ಸ್ಥಳಾಂತರಗೊಳ್ಳಬಹುದಾದ ಜನರಿಗೆ ಪುರ್ನರ್ ವಸತಿ ಕಲ್ಪಿಸಲು ಕಾಯ್ದಿರಿಸಿರುವ ಕಾರಣ ಸದರಿ ಅರ್ಜಿಗಳನ್ನು ದಿನಾಂಕ : 07–07–2011 ರಂದು ತಿರಸ್ಕರಿಸಲಾಗಿದೆ. ಆ ಕಾರಣದಿಂದ ಅರ್ಜಿದಾರರು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಸಂಚಾರಿ ಪೀಠದಲ್ಲಿ ಸಿಸಿಸಿ ನಂ. 2319–2337/2011 (ಸಿವಿಲ್) ಪ್ರಕರಣ ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ:28–05–2013ರಂದು ಅಫಿಡವಿಟ್ ಸಲ್ಲಿಸಿ, ಸದರಿ ಜಮೀನುಗಳನ್ನು 'ಮಹಾದಾಯಿ ಯೋಜನೆಯಡಿ ನಿರಾಶ್ರಿತರಿಗೆ ಕಾಯ್ದಿರಿಸಲಾಗಿದ್ದು, ಅವರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಎಂದು ಮುಚ್ಚಳಿಕೆ ಸಲ್ಲಿಸಲಾಗಿದೆ.

ಆ) ಮಾನ್ಯ ನ್ಯಾಯಾಲಯದಲ್ಲಿ ದಿ:28–05–2011ರಂದು ಸರ್ಕಾರದ ಆದೇಶವನ್ನು ಹಿಂದಕ್ಕೆ ಪಡೆಯದ ಹೊರತು ತೋರಾಳಿ ಗ್ರಾಮದಲ್ಲಿ ಲಭ್ಯವಿರುವ ಹೆಚ್ಚುವರಿ ಸರ್ಕಾರಿ ಜಮೀನನ್ನು ಅಥವಾ 2 ಎಕರೆ ಅಂತೆ ಹಂಚಲು ಬರುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಡ ಲಾಗಿದೆ.

ಸದರಿ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುವು ದರಿಂದ ಪ್ರಸ್ತುತ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ.

ನೀರಾವರಿ ಯೋಜನೆಗಳು

182(279); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ರಾಜ್ಯದಲ್ಲಿ ಪೂರ್ಣಗೊಂಡಿರುವ ಒಟ್ಟು ನೀರಾವರಿ ಯೋಜನೆ ಗಳೆಷ್ಟು? ಈ ಯೋಜನೆಗಳಿಂದ ಎಷ್ಟು ಸಾವಿರ ಎಕರೆ ನೀರಾವರಿಯಾಗುತ್ತದೆ